ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ೧. ನೇಸರ್ಗಿ ೧.೮೪ ಲಕ್ಷ ರೂಪಾಯಿಗಳು
೨. ಹತ್ತರ್ಗಿ ೪.೨೦ ಲಕ್ಷ ರೂ. ಗಳು
೩. ಖಾನಾಪುರ ೪.೦೦ ಲಕ್ಷ ರೂ. ಗಳು
೪. ಸದಲ್ಗ ೪.೦೦ ಲಕ್ಷ ರೂ. ಗಳು
೫. ರಾಯಬಾಗ ೫.೩೫ ಲಕ್ಷ ರೂ. ಗಳು

ಒಟ್ಟು ಮೊತ್ತ ೧೯. ೩೯ ಲಕ್ಷ ರೂ. ಗಳು

ಆ) ೧. ನೇಸರ್ಗಿ ಮತ್ತು
೨. ಹತ್ತರ್ಗಿ.

ಇ) ಇಲ್ಲ.

## ಮಂಧೋಳ ತಾಲ್ಲೂಕಿನಲ್ಲಿ ಪಿ. ಹೆಚ್. ಯ, ಮಂಜೂರ ಬಗ್ಗೆ

೭೬೪ ಶ್ರೀ ಬಿ. ಜಿ. ಜವಳಿ (ಮಂಧೋಳ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬ರಲ್ಲಿ ಮುಧೋಳ ತಾಲ್ಲೂಕಿನಲ್ಲಿ ಮಂಜೂರಾದ ಸಾರ್ವಜನಿಕ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು ?

ಆ) ಅವು ಯಾವ ಊರಿನಲ್ಲಿ ಮಂಜೂರು ಆಗಿವೆ?

ಇ) ಹೊಗಿದ್ದಲ್ಲಿ ಕೆಲಸ ಪ್ರಾರಂಭವಾಗದೇ ಇರಲು ಕಾರಣಗಳೇನು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಯಾವುದೂ ಮಂಜೂರಾಗಿಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

## ಪರಿಶಿಷ್ಟ ಜಾತಿಯ ನೌಕರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ

೯೬೫ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೆ?

ಅ) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿರುವ 'ಬಿ, ಮತ್ತು 'ಸಿ' ವರ್ಗಕ್ಕೆ ಸೇರಿದ ನೌಕರರೆಷ್ಟು, ಅವರುಗಳಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ನೌಕರರುಗಳೆಷ್ಟು;

ಆ) ಕ್ಯಾಬಿನೆಟ್ ದರ್ಜೆ ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳ ಆಪ್ತ ಶಾಖೆಗಳಲ್ಲಿ 'ಸಿ' ಗುಂಪಿಗೆ ಸೇರಿದ ನೌಕರರುಗಳೆಷ್ಟು ಅವರುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರೆಷ್ಟು?

ಇ) ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಶಾಖೆಗಳು ಸೇರಿದಂತೆ ಎಲ್ಲಾ ಮಂತ್ರಿಗಳ ಆಪ್ತ ಶಾಖೆಗಳಲ್ಲಿ 'ಸಿ' ಗುಂಪಿಗೆ ಸೇರಿದ ಒಬ್ಬ ಪರಿಶಿಷ್ಟ ಜಾತಿಯ ನೌಕರರನ್ನು ಕಡ್ಡಾಯವಾಗಿ ನೇಮಕ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮಂತ್ರಿ ಮಾಂತ್ರಿಗಳು).—

| | ಒಟ್ಟು | ಪರಿಶಿಷ್ಟ | |
|---|---|---|---|
| | | ಜಾತಿ | ಪಂಗಡ |
| ಎ) | | | |
| 'ಬಿ' ವರ್ಗ— | ೫ | ಇಲ್ಲ | ಇಲ್ಲ |
| 'ಸಿ' ವರ್ಗ— | ೬೫ | ೫ | ೧ |
| ಎ) | ೮೪ | ೪ | — |

ಇ) ಇಲ್ಲ

## ಸರಕಾರಿ ದವಾಖಾನೆಗಳ ಕುರಿತು

೧೨೧೯ ಶ್ರೀ ಸಿ.ಎಂ. ಉದಾಸಿ (ಹಾನಗಲ್ಲು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಹಾನಗಲ್ಲ ತಾಲ್ಲೂಕಿನ ಬೆಳಗಾಲ ಪೇಟೆ ಹಾಗೂ ಆಡೂರ ಗ್ರಾಮಗಳಲ್ಲಿ ೪,೦೦೦ಕ್ಕಿಂತ ಹೆಚ್ಚಿನ ಜನಸಂಖ್ಯೆ ಇದ್ದು ಈ ಗ್ರಾಮಗಳಲ್ಲಿ ತಾಲ್ಲೂಕು ಮಂಡಲಿಯು ದವಾಖಾನೆಗಳನ್ನು ಮೇಲ್ದರ್ಜೆಗೇರಿಸುವುದು ಸರ್ಕಾರದವರ ಗಮನದಲ್ಲಿಯೇ?

೨) ಬೆಳಗಾಲಪೇಟೆ ಗ್ರಾಮದ ದವಾಖಾನೆಯಲ್ಲಿ ಕಳೆದ ಆರು ತಿಂಗಳಿಂದಲೂ ವೈದ್ಯರ ಹುದ್ದೆಯು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು.—

೧) ದವಾಖಾನೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇಲ್ಲ. ಆದರೆ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಒಂದನೇ ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

೨) ದಿನಾಂಕ ೪-೯-೧೯೮೬ ರಿಂದ ಖಾಲಿ ಇದೆ. ಬದಲಿ ವ್ಯವಸ್ಥೆ ಮಾಡುವವರೆಗೆ ಹಾನಗಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಪ್ರಭಾರಿ ಆಧಾರದ ಮೇಲೆ ಬೆಳಗಾಲ ಪೇಟೆ ದವಾಖಾನೆಯ ಕೆಲಸ ನಿರ್ವಹಿಸುತ್ತಿದ್ದಾರೆ.

## ದಕ್ಷಿಣ ಕನ್ನಡದ ನ್ಯಾಯ ಬೆಲೆಯ ಅಂಗಡಿಗಳು

೧೨೨೦ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು, ಕಾನೂನು, ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ದಕ್ಷಿಣ ಕನ್ನಡದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಇದರಲ್ಲಿ ಖಾಸಗಿಯವರೆಷ್ಟು ಹಾಗೂ ಸಹಕಾರಿ ಸಂಘ ಸಂಸ್ಥೆಗಳು ನಡೆಸುವುದೆಷ್ಟು?

ಇ) ಈ ನ್ಯಾಯಬೆಲೆ ಅಂಗಡಿಗಳಲ್ಲಿ ವಂಚನೆ ಗ್ರಾಹಕರಿಗೆ ಮೋಸ ಮಾಡಿದ ಪ್ರಕರಣಗಳಿವೆಯೇ ಹಾಗಿದ್ದಲ್ಲಿ ಅವು ಯಾವುವು?

ಈ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕಾರ್ಯಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಎ) ೮೮೨